


# ವೇಗ+ಸ್ಥಿರತೆ ಮಯಂಕ್

**ದೆಹಲಿಯಲ್ಲಿ ಮೊದಲ ಯತ್ನದಲ್ಲಿ ವಿರಾಟ್ ಕೊಹ್ಲಿ ತರಹದವರನ್ನೂ ಕ್ಲಬ್‌ಗಳು ಒಳಗೆ ಬಿಟ್ಟುಕೊಂಡಿರಲಿಲ್ಲ. ಮಯಂಕ್ ಯಾದವ್ ಅವರಿಗೂ ಅದೇ ಅನುಭವ ಆಗಿತ್ತು. ಸಾನೆಟ್ ಕ್ಲಬ್‌ನ ಕೋಚ್ ತಾರಕ್ ಸಿನ್ಹ ಅವರು ಈ ಹುಡುಗನನ್ನು ಗುರುತಿಸದೇ ಹೋಗಿದ್ದರೆ ಈ ವೇಗದ ಪ್ರತಿಭೆ ನಮಗೆ ಸಿಗುತ್ತಿರಲಿಲ್ಲ.**

■ **ವಿಶಾಖ ಎನ್.**

ಟೆನ್ನಿಸ್ ಬಾಲ್‌ನಲ್ಲಿ ರಪ್ಪನೆ ಚೆಂಡು ಹಾಕುತ್ತಿದ್ದ ಉಮ್ರಾನ್ ಮಲಿಕ್, ಆಮೇಲೆ ಚುಟುಕು ಕ್ರಿಕೆಟ್‌ನಲ್ಲಿ ವೇಗದ ಎಸೆತಗಳಿಂದ ಗುರುತಾಗಿ ಹೆಚ್ಚು ವರ್ಷಗಳೇನೂ ಆಗಿಲ್ಲ. ವರುಣ್ ಆರನ್ ವೇಗದ ಎಸೆತಗಳೂ ಒಂದು ಕಾಲದಲ್ಲಿ ಸುದ್ದಿ ಮಾಡಿದ್ದವು. ಜಸ್ಪ್ರೀತ್ ಬುಮ್ರಾ ಕಡಿಮೆ ರನ್ ಅಪ್‌ನಿಂದಲೇ ಚೆಂಡು ಹಾಕುವ ವೇಗದಿಂದ ದಿಗ್ಗಜ ಬ್ಯಾಟರ್‌ಗಳೂ ಚಿಂದಿ ಆದ ಹಲವು ಉದಾಹರಣೆಗಳಿವೆ. ಅಷ್ಟೇಕೆ, ಮೊಹಮ್ಮದ್ ಸಿರಾಜ್ ಬೆಂಕಿ ಚೆಂಡು ಹಾಕಬಲ್ಲ ನಿಸ್ಸೀಮ ಎಂದೂ ನಾವೆಲ್ಲ ಸಂಭ್ರಮಿಸಿದ್ದು ಮೊನ್ನೆ ಮೊನ್ನೆಯಷ್ಟೆ ಅಲ್ಲವೇ?

ಈಗ ಮಯಂಕ್ ಯಾದವ್ ಪ್ರತಿ ಗಂಟೆಗೆ 156.7 ಕಿ.ಮೀ. ವೇಗದ ಎಸೆತವೊಂದನ್ನು (ಈ ಋತುವಿನ ಅತಿ ವೇಗದ ಎಸೆತ) ಇತ್ತೀಚಿನ ಆರ್‌ಸಿಬಿ ವಿರುದ್ಧದ ಪಂದ್ಯದಲ್ಲಿ ಹಾಕಿದ್ದನ್ನು ನೋಡಿ ಕಣ್ಣು ಅರಳಿಸಿದ್ದೇವೆ.

ಮಯಂಕ್ ಈ ಸಲದ ಐಪಿಎಲ್‌ನ ಮೊದಲ ಎರಡೂ ಪಂದ್ಯಗಳಲ್ಲಿ ಪಂದ್ಯ ಶ್ರೇಷ್ಠ ಪ್ರಶಸ್ತಿ ಪಡೆದಿರುವುದು ವಿಶೇಷವಷ್ಟೇ ಅಲ್ಲ, ಚುಟುಕು ಕ್ರಿಕೆಟ್‌ನ ಬ್ಯಾಟರ್‌ಗಳ ಪ್ರಾಬಲ್ಯಕ್ಕೆ ಒಡ್ಡಿರುವ ದೊಡ್ಡ ಸವಾಲು. ಪಂಜಾಬ್ ಕಿಂಗ್ಸ್ ವಿರುದ್ಧದ ಪಂದ್ಯದಲ್ಲಿ 27 ರನ್ ನೀಡಿ 3 ವಿಕೆಟ್ ಪಡೆದ ಈ ಹುಡುಗ ಬೆಂಗಳೂರು ರಾಯಲ್ ಚಾಲೆಂಜರ್ಸ್ (ಆರ್‌ಸಿಬಿ) ತಂಡವನ್ನು ತವರು ನೆಲದಲ್ಲೇ ಹೆಡೆಮುರಿ ಕಟ್ಟಿಹಾಕಿದ್ದನ್ನು ನೋಡಿದೆವು. ಈ ಪಂದ್ಯದಲ್ಲಿಯಂತೂ ಬರೀ 14 ರನ್ ಕೊಟ್ಟು 3 ವಿಕೆಟ್ ಪಡೆದ ಮಯಂಕ್ ವೇಗ ಕಂಡು ತವರಿನ ಅಭಿಮಾನಿಗಳು ಬಾಯಿಯನ್ನು ಎರಡೂ ಕೈಗಳಿಂದ ಮುಚ್ಚಿಕೊಂಡರು.

ಭಾರತದ ಬೌಲಿಂಗ್ ಇತಿಹಾಸದಲ್ಲಿ ವೇಗಿಗಳು ಎಲ್ಲೋ ಅಲ್ಲೊಮ್ಮೆ ಇಲ್ಲೊಮ್ಮೆ ಹೊಳೆದ ನಕ್ಷತ್ರಗಳಂತೆಯೇ ಕಾಣುತ್ತಾರೆ. ಕಪಿಲ್ ದೇವ್ ಬರುವ ಮೊದಲು ಇಂತಹ ಪರಿಕಲ್ಪನೆಯ ಕುರಿತು ಭಾರತ ತಂಡದ ವೀಕ್ಷಕ ವಿವರಣೆಕಾರರೂ ಮಾತನಾಡುತ್ತಿರಲಿಲ್ಲ. ಬಿ.ಎಸ್. ಚಂದ್ರಶೇಖರ್ ಬೌನ್ಸರ್ ಕೂಡ ಹಾಕಬಲ್ಲ ವಿಶೇಷ ಸ್ಪಿನ್ನರ್ ರೀತಿ ತಂಡದಲ್ಲಿ ಇದ್ದವರು. ಆಮೇಲೆ ದೊಡ್ಡ ಹೆಸರು ಮಾಡಿದ ಬೌಲರ್‌ಗಳಲ್ಲಿ ಜಾವಗಲ್ ಶ್ರೀನಾಥ್, ಅನಿಲ್ ಕುಂಬ್ಳೆ, ಹರಭಜನ್ ಸಿಂಗ್, ರವಿಚಂದ್ರನ್ ಅಶ್ವಿನ್ ಅವರಂತಹವರು ಕಾಣುತ್ತಾರೆ. ಈಗಿನ ವೇಗದ ಬೌಲರ್‌ಗಳು ಆ ಮಟ್ಟ ತಲುಪುವುದು ಕಷ್ಟ. ಆದಾಗ್ಯೂ ಚೇತನ್ ಶರ್ಮ, ಅಜಿತ್ ಅಗರ್ಕರ್, ಜಹೀರ್ ಖಾನ್, ಇರ್ಫಾನ್ ಪಠಾಣ್ ಇವರೆಲ್ಲರ ಹೆಸರುಗಳನ್ನು ಆಗೀಗ ನೆನಪಿಸಿಕೊಳ್ಳುತ್ತೇವೆ. ಇವರೆಲ್ಲರಿಗಿಂತ ಹೆಚ್ಚು ಪ್ರಭಾವಿ ಎನಿಸಿಕೊಂಡಿದ್ದು ಕರ್ನಾಟಕದ ಜಾವಗಲ್ ಶ್ರೀನಾಥ್ ಹಾಗೂ ವೆಂಕಟೇಶ ಪ್ರಸಾದ್. ಶ್ರೀನಾಥ್ ಅವರ ಎಸೆತಗಳಲ್ಲಿ ಉತ್ಕಟತೆ ಇತ್ತು. ವೇಗಕ್ಕಿಂತ ಹೆಚ್ಚಾಗಿ ಅವುಗಳಲ್ಲಿ ಇದ್ದ ತಾಲೀಮಿಗೆ ಫಲ ಸಂದಿದ್ದೇ ಹೆಚ್ಚು. ಇನ್ನು ವೆಂಕಟೇಶ ಪ್ರಸಾದ್ ತಮ್ಮ ಲೆಗ್ ಕಟರ್‌ಗಳಿಂದಲೇ ಬ್ಯಾಟ್ಸ್‌ಮನ್‌ಗಳನ್ನು ಕೆಣಕುತ್ತಾ ವಿಕೆಟ್ ಎತ್ತುತ್ತಿದ್ದರು. ಆಶೀಶ್ ನೆಹ್ರಾ, ಶ್ರೀಶಾಂತ್, ಆರ್.ಪಿ. ಸಿಂಗ್,

ಆಸಕ್ತಿ ಮೂಡಿಸುವ
ಹೈ ಆರ್ಮ್ ಆ್ಯಕ್ಷನ್